**ಸಾಕ್ಷಿಗೆ ದಿನಾಂಕ : 20-02-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**
**ಮಧ್ಯಂತರ ಅರ್ಜಿ ಮೇಲೆ ಆದ ಆದೇಶದಂತೆ**
**ಮುಂದುವರೆದ ಪಾಟೀ ಸವಾಲು : ಶ್ರೀ.ಎ.ಎ.ಎಮ್ ವಕೀಲರಿಂದ ಶ್ರೀ.ಎಚ್.ವಾಯ್.ಪಿ ವಕೀಲರ ಪರ ಆರೋಪಿ ಪರವಾಗಿ**

1.ನಾನು ದಿ:10.10.2022 ರಂದು ಆರೋಪಿತನ ಖಾತೆಗೆ 1 ಲಕ್ಷ ರೂಪಾಯಿಯನ್ನು ನನ್ನ ಕೆ.ವಿ.ಜಿ ಬ್ಯಾಂಕ ಖಾತೆಯಿಂದ ಹಣ ವರ್ಗಾವಣೆ ಮಾಡಿರುತ್ತೇನೆ. ಅದನ್ನು ಪುಷ್ಠಿಕರಿಸಲು ನಿಮ್ಮ ಖಾತಾ ಉತಾರೆ ಹಾಜರಪಡಿಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಿಮ್ಮ ಖಾತಾ ಉತಾರೆ ಹಾಜರಪಡಿಸಲು ಏನಾದರೂ ತೊಂದರೆ ಇತ್ತಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ.

2.ಲೋಕಾಪೂರದಲ್ಲಿ ನನ್ನ ತಂಪು ಪಾನೀಯದ, ಖಾನಾವಳಿ ಮತ್ತು ಮೊಬೈಲ ಅಂಗಡಿಗಳು ಒಂದಕ್ಕೊಂದು ತಗುಲಿ ಇದ್ದು, ಅಲ್ಲಿ ಆರೋಪಿತನಿಗೆ 3 ಲಕ್ಷ 50 ಸಾವಿರ ನೀಡಿರುತ್ತೇನೆ. ಸದರಿ 3 ಲಕ್ಷ 50 ಸಾವಿರಗಳನ್ನು ನಾನು ಬ್ಯಾಂಕಿನಿಂದ ತಂದಿಲ್ಲ, ಕೂಡಿಸಿ ಇಟ್ಟಿದ್ದೆನು. ಸದರಿ 3 ಅಂಗಡಿಗಳು ನನ್ನ ಮಾಲೀಕತ್ವದ್ದು. ಅದನ್ನು ಪುಷ್ಠಿಕರಿಸಲು ದಾಖಲಾತಿ ಹಾಜರಪಡಿಸಿಲ್ಲ. 3 ಅಂಗಡಿಗಳಿಂದ ಬರುವ ಆದಾಯದ ಬಗ್ಗೆ ಯಾವುದಾದರೂ ಲೆಕ್ಕಪತ್ರ ಇಡುತ್ತೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನೀವು 1 ಲಕ್ಷ ರೂಪಾಯಿ ಆರ್.ಟಿ.ಜಿ.ಎಸ್ ಮಾಡಿದಂತೆ ಉಳಿದ ನಿಮ್ಮ ಪ್ರಕಾರ 3 ಲಕ್ಷ 50 ಸಾವಿರ ರೂಪಾಯಿಗಳನ್ನು ಸಹ ಆರ್.ಟಿ.ಜಿ.ಎಸ್ ಮೂಲಕ ಏಕೆ ವರ್ಗಾವಣೆ ಮಾಡಲಿಲ್ಲ ಎಂದರೆ ಖಾತೆಯಲ್ಲಿ ಅಷ್ಟು ಹಣ ಇರಲಿಲ್ಲ, ನನ್ನ ಬಳಿ ಇದ್ದ ಹಣ ನೀಡಿದೆ ಎಂದು ಹೇಳುತ್ತಾರೆ. ನನ್ನ ಖಾತೆಯ ಮೂಲಕ 3 ಲಕ್ಷ 50 ಸಾವಿರ ರೂಪಾಯಿ ಮತ್ತು ಅದಕ್ಕಿಂತ ಹೆಚ್ಚಿನ ಮೊತ್ತದ ವ್ಯವಹಾರ ಆಗಿಲ್ಲ. ನಿಮಗೆ 3 ಲಕ್ಷ 50 ಸಾವಿರದಷ್ಟು ಹಣ ನೀಡುವಷ್ಟು ಆರ್ಥಿಕ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನೀವು ಆರೋಪಿತನಿಗೆ 3 ಲಕ್ಷ 50 ಸಾವಿರದಷ್ಟು ಮೊತ್ತ ನೀಡಿಲ್ಲ ಎಂದರೆ ಸರಿಯಲ್ಲ.

3.ಸಾಕ್ಷಿಗೆ ಈಗ ನಿಪಿ-7 ನ್ನು ತೋರಿಸುತ್ತಿದ್ದು ಅದನ್ನು ಯಾರು ತೆಗೆದುಕೊಂಡು ಬಂದರು ಎಂದರೆ ಆರೋಪಿತ ಎಂದು ಹೇಳುತ್ತಾರೆ. ನಿಪಿ-7 ರ ಮೇಲೆ ನನ್ನ ಸಹಿ ಇಲ್ಲ. ಸದರಿ ನಿಪಿ-7 ದಾಖಲಾತಿಯನ್ನು ದಸ್ತು ಬರಹಗಾರರಾದ ಲೋಕಾಪೂರದ ತೆಗ್ಗಿ ಅವರ ಕಚೇರಿಯಲ್ಲಿ ಬರೆಯಲಾಯಿತು. ನಮ್ಮ ಅಂಗಂಡಿಯಿಂದ ತೆಗ್ಗಿ ಅವರ ಕಚೇರಿ ಅರ್ಧ ಕಿ.ಮೀ ಅಂತರದ ಒಳಗಡೆ ಇದೆ. ನಿಪಿ-7 ದಾಖಲಾತಿ ಬರೆಯುವಾಗ ನಾನು ಹಾಜರ ಇದ್ದೆನು. ನನ್ನನ್ನು ಹೊರತುಪಡಿಸಿ ರಾಮಣ್ಣ ಕಣಕಪ್ಪನವರ ಮತ್ತು ತಿಪ್ಪಣ್ಣ ಆಡಿನ್ನವರವರು ಹಾಜರ ಇದ್ದರು. ನಿಪಿ-7

ದಾಖಲಾತಿಯನ್ನು ಬರೆದು ನಂತರ ಹಣ ನೀಡಿರುತ್ತೇನೆ. ನಿಪಿ-7 ದಾಖಲಾತಿ ಬರೆಯುವಾಗ ನೀವು ಹಣ ನೀಡಿಲ್ಲ ಎಂದರೆ ಹಣ ಪಡದೇ ನಿಪಿ-7 ದಾಖಲಾತಿ ಬರೆದುಕೊಟ್ಟರು ಎಂದು ಹೇಳುತ್ತಾರೆ. ನಿಪಿ-7 ದಾಖಲಾತಿ 2 ನೇ ಪುಟವನ್ನು ಸಾಕ್ಷಿಗೆ ತೋರಿಸುತ್ತಿದ್ದು ಅದರಲ್ಲಿ ಯಾರ ಯಾರ ಸಹಿ ಇದೆ ಎಂದರೆ ಸಾಕ್ಷಿಯು ಅಶೋಕ ಪೂಜಾರಿ ಅವರ ಸಹಿ ಗುರುತಿಸಿದ್ದು ಅದನ್ನು ನಿಡಿ-1 ಎಂದು, ರಾಮಣ್ಣ ಕಣಕಪ್ಪನವರ ಅವರ ಸಹಿ ಗುರುತಿಸಿದ್ದು ಅದನ್ನು ನಿಡಿ-2 ಎಂದು, ತಿಪ್ಪಣ್ಣ ಆಡಿನ್ನವರ ಅವರ ಸಹಿ ಗುರುತಿಸಿದ್ದು ಅದನ್ನು ನಿಡಿ-3 ಎಂದು, ದಸ್ತು ಬರಹಗಾರರಾದ ಬಿ.ಎಮ್.ತೆಗ್ಗಿ ಅವರ ಸಹಿ ಗುರುತಿಸಿದ್ದು ಅದನ್ನು ನಿಡಿ-4 ಎಂದು ಗುರುತಿಸಲಾಯಿತು. ಸದರಿ 4 ಸಹಿಗಳನ್ನು ನನ್ನ ಸಮಕ್ಷಮ ಆಗಿವೆ. ನಿಡಿ-1 ಸಹಿ ಇದು ಆರೋಪಿತನದಲ್ಲ ಎಂದರೆ ಸರಿಯಲ್ಲ. ನಿಪಿ-1(ಎ) ಮತ್ತು ನಿಡಿ-1 ಸಹಿ ಇವು ಬೇರೆ ಬೇರೆ ಇವ ಎಂದರೆ ಅವರದ್ದೆ ಸಹಿ ಎಂದು ಸಾಕ್ಷಿ ಹೇಳುತ್ತಾರೆ. ನಿಪಿ-1(ಎ) ರಲ್ಲಿ ಅಶೋಕ ಎನ್ ಪೂಜಾರಿ ಎಂದು ನಮೂದು ಇದ್ದು, ನಿಡಿ-1 ಇದು ಎ.ಎನ್.ಪೂಜಾರಿ ಎಂದು ನಮೂದು ಇದೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು 2 ಸಹಿಗಳು ಅವರದೆ ಇರುತ್ತವೆ ಎಂದು ಹೇಳುತ್ತಾರೆ. ನಿಪಿ-7 ಬಾಂಡ್ ಪೇಪರನ್ನು ತೆಗ್ಗಿ ಅವರ ಕಚೇರಿಯಲ್ಲಿ ಬರೆಯಲಾಯಿತು ಎಂದು ಮತ್ತು ನೀವು ಆರೋಪಿತನಿಗೆ ಹಣ ನೀಡಿದಿರಿ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಒಂದು ದಾಖಲಾತಿ ತೋರಿಸುತ್ತಿದ್ದು, ಅದು ಆಧಾರ ಕಾರ್ಡ ಆಗಿದ್ದು, ಅದರಲ್ಲಿ ಇದ್ದ ಆರೋಪಿತನ ಛಾಯಾಚಿತ್ರ ಸಾಕ್ಷಿ ಗುರುತಿಸುತ್ತಾರೆ. ಸದರಿ ಆಧಾರಕಾರ್ಡನ್ನು ನಿಡಿ-5 ಎಂದು ಗುರುತಿಸಲಾಯಿತು. ನಿಡಿ-5 ರಲ್ಲಿ ಇದ್ದ ವಿಳಾಸ ಕೆ/ಆಫ್ ನಿಂಗಪ್ಪ ವಾರ್ಡ ನಂ.1 ಪಾಲ್ಕಿ ಮಾನ್ಯ ಬಾಗಲಕೋಟೆ, ಕರ್ನಾಟಕ 587122 ಎಂದು ನಮೂದು ಇದೆ ಎಂದರೆ ಸರಿ. ನೀವು ಯಾವ ವಿಳಾಸಕ್ಕೆ ನೋಟಿಸ್ ನೀಡಿದಿರಿ ಎಂದರೆ ಅರಳಿಕಟ್ಟಿ ವಿಳಾಸಕ್ಕೆ ಎಂದು ಸಾಕ್ಷಿ ಹೇಳುತ್ತಾರೆ. ಅರಳಿಕಟ್ಟಿ ಮತ್ತು ಪಾಲ್ಕಿಮಾನ್ಯ ಬೇರೆ ಬೇರೆ ಗ್ರಾಮಗಳು ಎಂದರೆ ಒಂದೇ ಎಂದು ಸಾಕ್ಷಿ ಹೇಳುತ್ತಾರೆ.

4.ಲೋಕಾಪೂರದಿಂದ ಪಾಲ್ಕಿಮಾನ್ಯ ಎಷ್ಟು ಅಂತರದಲ್ಲಿ ಇದೆ ಎಂದರೆ ಅರ್ಧ ಕಿ.ಮೀ ಅಂತರ ಇದೆ. ನನ್ನ ಪ್ರಕಾರ ಪಾಲ್ಕಿ ಮಾನ್ಯ ಮತ್ತು ಅರಳಿಕಟ್ಟಿ ಎರಡು ಬೇರೆ ಬೇರೆ ಓಣಿಗಳು. ಎರಡು ಅಕ್ಕ-ಪಕ್ಕದಲ್ಲಿ ಇವೆ. ಅರಳಿಕಟ್ಟಿಯಲ್ಲಿ ಇರುವ ಜನರು ಅರಳಿಕಟ್ಟಿ ಗ್ರಾಮದ ನಿವಾಸಿಗಳು ಎಂದು ಹಾಗೂ ಪಾಲ್ಕಿಮಾನ್ಯ ಗ್ರಾಮದಲ್ಲಿದ್ದ ಜನರು ಪಾಲ್ಕಿಮಾನ್ಯ ಗ್ರಾಮದ ನಿವಾಸಿಗಳು ಎಂದು ಗುರುತಿಸಿಕೊಳ್ಳುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅರಳಿಕಟ್ಟಿ ಮತ್ತು ಪಾಲ್ಕಿಮಾನ್ಯ 2 ಬೇರೆ ಬೇರೆ ಗ್ರಾಮಗಳು ಎಂದರೆ ಸರಿಯಲ್ಲ. ನೀವು ಕಳುಹಿಸಿದ ನೋಟಿಸ್ ಆರೋಪಿತನಿಗೆ ತಲುಪಿತಾ ಎಂದರೆ

7 ದಿನ ಪ್ರಯತ್ನಿಸಿ ಹಿಂದಿರುಗಿ ಬಂದಿತು ಎಂದು ಹೇಳುತ್ತಾರೆ. ನಿಪಿ-5 ಲಕೋಟೆಯಲ್ಲಿ ಈ ವಿಳಾಸದಾರರು ಊರಲ್ಲಿ ಇಲ್ಲದ ಕಾರಣ ಪರತ್ ಎಂದು ನಮೂದು ಇದೆ ಎಂದರೆ ಸರಿಯಲ್ಲ. ಆರೋಪಿತ ಜಾಡರ ಅರಳಿಕಟ್ಟಿ ಗ್ರಾಮದ ನಿವಾಸಿ ಅಲ್ಲ, ಪಾಲ್ಕಿ ಮಾನ್ಯ ಗ್ರಾಮದ ನಿವಾಸಿ ಇದ್ದು, ನೀವು ತಪ್ಪು ವಿಳಾಸಕ್ಕೆ ನೋಟಿಸ್ ಕಳುಹಿಸಿದ್ದೀರಿ ಆ ಕಾರಣದಿಂದ ಊರಲ್ಲಿ ಇಲ್ಲ ಎಂದು ಹಿಂದಿರುಗಿ ಬಂದಿದೆ ಎಂದರೆ ಸರಿಯಲ್ಲ. ನೀವು ಆರೋಪಿತ ಜಾಡರಅರಳಿಕಟ್ಟಿ ಗ್ರಾಮದ ನಿವಾಸಿ ಎಂದು ಆತನಿಗೆ 3 ಲಕ್ಷ 50 ಸಾವಿರ ನೀಡಿದಿರಿ ಎಂದು ಮತ್ತು ಆತ ನಿಮಗೆ ಬಾಂಡ್ ಪೇಪರ ಬರೆದುಕೊಟ್ಟ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಆರೋಪಿತನ ನಡುವೆ 1 ಲಕ್ಷ ರೂಪಾಯಿ ಮಾತ್ರ ಆಗಿದ್ದು, ಅದರಲ್ಲಿ 80 ಸಾವಿರ ಈಗಾಗಲೇ ಹಿಂದಿರುಗಿಸಿದ್ದು, ಕೇವಲ 20 ಸಾವಿರ ಕೊಡುವುದು ಮಾತ್ರ ಬಾಕಿ ಇದೆ ಎಂದರೆ ಸರಿಯಲ್ಲ. ನಿಪಿ-1(ಎ) ಸಹಿ ಹೊರತುಪಡಿಸಿ ಉಳಿದ ಬರವಣಿಗೆ ಆರೋಪಿತನದಲ್ಲ ಎಂದರೆ ಆತನೆ ಬರೆದುಕೊಂಡು ಬಂದು ಕೊಟ್ಟಿದ್ದಾನೆ ಎಂದು ಸಾಕ್ಷಿ ಹೇಳುತ್ತಾರೆ. ನಿಪಿ-1 ಚೆಕನಲ್ಲಿ ನಮೂದಿಸಿದ ಮೊತ್ತ ಕೊಡುವುದಕ್ಕೆ ಆರೋಪಿತ ಬಾದ್ಯಸ್ಥ ಅಲ್ಲ ಎಂದರೆ ಸರಿಯಲ್ಲ. ಆರೋಪಿತನಿಂದ ಪಡೆದ ಖಾಲಿ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಹೆಚ್ಚಿನ ಮೊತ್ತವನ್ನು ಪಡೆಯುವ ಉದ್ದೇಶದಿಂದ ಸುಳ್ಳು ಪ್ರಕರಣ ಸಲ್ಲಿಸಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ